Action will be taken depending on the need and availability of funds.

ಸಂ:ಗ್ರಾಅಪ 18 ಗ್ರಾನೀಸ(1)09

(ಶೋಭಾ ಕರಂದ್ಲಾಜೆ)

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

321 ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್ (ಜಮಖಂಡಿ)

ಮಾನ್ಯ ಪಶುಸಂಗೋಪನಾ ಸಚಿವರು

ಅ) ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ಪಶು ಚಿಕಿತ್ಸಾಲಯಗಳೆಷ್ಟು?

1940

ಆ) ಒಟ್ಟು ಖಾಲಿಯಿರುವ ವೈದ್ಯರ ಹುದ್ದೆಗಳೆಷ್ಟು ಮತ್ತು ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಂಡ ಕ್ರಮಗಳೇನು?

1088.

100 ಜನ ನಿವೃತ್ತ ಪಶುವೈದ್ಯರನ್ನು ಗುತ್ತಿಗೆ ಮೇಲೆ ಭರ್ತಿ ಮಾಡಿಕೊಳ್ಳಲು ಸರ್ಕಾರ ಅನುಮತಿ ನೀಡಿದೆ. ಈ ಪೈಕಿ 84 ನಿವೃತ್ತ ಪಶುವೈದ್ಯಾಧಿಕಾರಿಗಳು 2 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುತ್ತಾರೆ.

ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ 200 ಪಶುವೈದ್ಯಾಧಿಕಾರಿಗಳನ್ನು ನೇರ ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೆ ಚಾಲನೆಯಲ್ಲಿದೆ. ಅಂತಿಮ ಆಯ್ಕೆ ಪಟ್ಟಿ ಸ್ವೀಕೃತಗೊಂಡ ನಂತರ ಖಾಲಿ ಇರುವ ಪಶುವೈದ್ಯಾಧಿಕಾರಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಇ) ಜಮಖಂಡಿ ಕ್ಷೇತ್ರದ ಹುನ್ನೂರ, ಹಿರೇಪಡಸಲಗಿ ಹಾಗೂ ಜಂಬಗಿ (ಬೆ.ಕೆ.)ಗ್ರಾಮಗಳಿಗೆ ಅತೀ ಅವಶ್ಯವಿರುವ ಪಶುಚಿಕಿತ್ಸಾಲಯ ಗಳನ್ನು ಯಾವಾಗ ಮಂಜೂರು ಮಾಡಲಾಗುವುದು?

2003ರ ಜಾನುವಾರು ಗಣತಿ ಪ್ರಕಾರ, ಜಮಖಂಡಿ ತಾಲ್ಲೂಕಿನಲ್ಲಿ 1,18,599 ಜಾನುವಾರು ಘಟಕಗಳಿವೆ. ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ ಪ್ರತಿ 5000 ಜಾನುವಾರು ಘಟಕಗಳಿಗೆ ಒಂದು ಪಶುಚಿಕಿತ್ಸಾಲಯ ಇರಬೇಕಾಗಿದೆ. ಅದರಂತೆ, ಜಮಖಂಡಿ ತಾಲ್ಲೂಕಿನಲ್ಲಿ 24 ಪಶುಚಿಕಿತ್ಸಾಲಯಗಳ ಅವಶ್ಯಕತೆಯಿದ್ದು, ಅಲ್ಲಿ 27 ಪಶುವೈದ್ಯ ಸಂಸ್ಥೆಗಳು ಮಂಜೂರಾಗಿ ಕಾರ್ಯನಿರ್ವಹಿಸುತ್ತಿವೆ. ಆದ್ದರಿಂದ,

ಹುನ್ನೂರ, ಹಿರೇಪಡಸಲಗಿ ಹಾಗೂ ಜಂಬಗಿ (ಬೆ.ಕೆ) ಗ್ರಾಮಗಳಲ್ಲಿ ಹೊಸ ಪಶುಚಿಕಿತ್ಸಾಲಯ ತೆರೆಯುವ ಯಾವುದೇ ಕಾರ್ಯಕ್ರಮ ಇರುವುದಿಲ್ಲ.

ಸಂಖ್ಯೆ: ಪಸಂಮೀ 130 ಪಸಸೇ 2009

(ರೇವೂನಾಯಕ್ ಬೆಳಮಗಿ)
ಪಶುಸಂಗೋಪನಾ ಸಚಿವರು.

ಕರ್ನಾಟಕ ವಿಧಾನಸಭೆ
(ಹದಿಮೂರನೇ ವಿಧಾನಸಭೆ–ಎರಡನೇ ಅಧಿವೇಶನ)

ಗುರುವಾರ 26ನೇ ಫೆಬ್ರವರಿ 2009ರಂದು ಸದನವು
ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ/ಮಧ್ಯಾಹ್ನ 11.00 ಗಂಟೆಗೆ ಸಮಾವೇಶಗೊಂಡಿತು
ಅಧ್ಯಕ್ಷರು/ಉಪಾಧ್ಯಕ್ಷರು ಶ್ರೀ ಜಗದೀಶ್ ಶೆಟ್ಟರ್ ರವರು

ಪೀಠವನ್ನು ಅಲಂಕರಿಸಿದ್ದರು